ಮಾಡುತ್ತೇವೆ. ಎಂದು ಭರವಸೆ ಕೊಟ್ಟಿದ್ದನ್ನು ಕೇಳಿಕೊಂಡು ಬಂದು, ಕೇಳಿ ಕೇಳಿ ಬೇಸತ್ತು, ಈ ಸಲ ಅಲ್ಲಿ ಜನರು ಯಾವ ಪಕ್ಷಕ್ಕೂ ಓಟುಕೊಡುವುದಿಲ್ಲ, ನಿಮ್ಮ ಪಕ್ಷಕ್ಕೆ ಓಟುಕೊಡುತ್ತೇವೆ ನೀವು ಮಾಡಿಸಿ ಎಂದು ಹೇಳಿ, ನಮ್ಮನ್ನು ಗೆಲ್ಲಿಸಿ ಕಳಿಸಿಕೊಟ್ಟಿದ್ದಾರೆ, ಆದುದರಿಂದ ತಮ್ಮ ಅವಧಿಯಲ್ಲಿ ಈ ಯೋಜನೆಯನ್ನು ಜಾಗ್ರತೆಯಾಗಿ ಮಂಜೂರು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಅಧ್ಯಕ್ಷರು.— ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಾರೆ. ಬಿಡಿ.

ವಿಷಯ : ಮೈಸೂರು ದಸರಾ ವಸ್ತು ಪ್ರದರ್ಶನದ ಬಗ್ಗೆ

ಪ್ರಶ್ನೆ : **198 (496) ಶ್ರೀ ಧನಂಜಯಕುಮಾರ್** (ಮಂಗಳೂರು).— ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) 1983ರ ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಭಾಗವಹಿಸಿದ್ದ ಮಳಿಗೆಗಳ ಸಂಖ್ಯೆ ಎಷ್ಟು ;

ಆ) ಮೇಲ್ಕಂಡ ಮಳಿಗೆಗಳಿಂದ ಹರಾಜು ಅಥವಾ ಬಾಡಿಗೆ ರೂಪದಲ್ಲಿ ಬಂದ ಆದಾಯವೆಷ್ಟು?

ಶ್ರೀ ಎಸ್.ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).— **ಅ)** 258 ಮಳಿಗೆಗಳು.

ಆ) ಮೇಲ್ಕಂಡ ಮಳಿಗೆಗಳ ಹರಾಜು ಮತ್ತು ಬಾಡಿಗೆಯಿಂದ ಬಂದ ಆದಾಯ ರೂ. 764242-40 ಪೈಸೆ.

ಶ್ರೀ ವಿ. ಧನಂಜಯಕುಮಾರ್.— ಈ ಹಣದಿಂದ ಖಾಯಂ ಮಳಿಗೆಗಳನ್ನು ಮಾಡಲಿಕ್ಕಾಗಿ, ಕಟ್ಟಡ, ಕಟ್ಟಿಸಲಿಕ್ಕೆ ಏನಾದರೂ ಸರಕಾರದ ಯೋಜನೆ ಇದೆಯೇ?

ಶ್ರೀ ಎಸ್.ಆರ್. ಬೊಮ್ಮಾಯಿ — ಪ್ರತಿ ವರ್ಷ ಈ ರೀತಿ ಮಾಡುವುದಕ್ಕಿಂತ ಖಾಯಂ ಆಗಿ ಮಳಿಗೆಗಳನ್ನು ಕಟ್ಟುವ ಯೋಜನೆ ಸರಕಾರದ ಪರಿಶೀಲನೆಯಲ್ಲಿದೆ.

Mr Speaker— Question hour is over

2. ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ವಿಷಯ :

ಪ್ರಶ್ನೆ : **199 (614) ಶ್ರೀ ಆರ್.ಎನ್. ನಾಯಕ್** (ಭಟಕಲ್).— ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ;—

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿರುವ ಒಟ್ಟು ಅರಣ್ಯವಲಯಾಧಿಕಾರಿಗಳ ಸಂಖ್ಯೆ ಎಷ್ಟು, ಅವರಲ್ಲಿ ಹಿಂದುಳಿದ ವರ್ಗಕ್ಕೆ ಸೇರಿದವರ ಸಂಖ್ಯೆ ಎಷ್ಟು ;

ಆ) ಅವಧಿ ಪೂರ್ವವಾಗಿ ವರ್ಗಾಯಿಸಲ್ಪಟ್ಟ ಸದರಿ ಅರಣ್ಯವಲಯಾಧಿಕಾರಿಗಳ ಸಂಖ್ಯೆ ಎಷ್ಟು ? ಅವರಲ್ಲಿ ಹಿಂದುಳಿದ ವರ್ಗಕ್ಕೆ ಸೇರಿದವರ ಸಂಖ್ಯೆ ಎಷ್ಟು ?

ಉತ್ತರ : ಶ್ರೀ ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).— ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಒಟ್ಟು 67 ಅರಣ್ಯವಲಯಾಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ಅವರ ಪೈಕಿ 18 ಜನ ಹಿಂದುಳಿದ ವರ್ಗಕ್ಕೆ ಸೇರಿದವರಾಗಿರುತ್ತಾರೆ.

ಆ) ಅವಧಿಪೂರ್ವವಾಗಿ ವರ್ಗಾಯಿಸಲ್ಪಟ್ಟ ಅರಣ್ಯ ವಲಯಾಧಿಕಾರಿಗಳ ಸಂಖ್ಯೆ 6. ಇವರಲ್ಲಿ ಹಿಂದುಳಿದವರ ವರ್ಗಕ್ಕೆ ಸೇರಿದವರ ಸಂಖ್ಯೆ 3.

ವಿಷಯ : ನೀರಾವರಿ ಜಮೀನನ್ನು ಏತ ನೀರಾವರಿಯಿಂದ ಬಸವನ ಕಾಲುವೆ ಮತ್ತು ರಾಯರ ಕಾಲುವೆ ಮೂಲಕ ಊಳುತ್ತಿದ್ದು ದ್ವಿಗುಣ ಪ್ರಮಾಣದ ಕಂದಾಯದಿಂದ ರೈತರಿಂದ ವಸೂಲಿ ಮಾಡುತ್ತಿರುವುದನ್ನು ಕುರಿತು,

ಪ್ರಶ್ನೆ : **201 (407) ಶ್ರೀ ಜಿ. ಶಂಕರಗೌಡ** (ಹೊಸಪೇಟೆ).— ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಬಸವನ ಕಾಲುವೆ ಮತ್ತು ರಾಯರ ಕಾಲುವೆಗಳಿಗೊಳಪಡುವ ತಮ್ಮ ಜಮೀನುಗಳನ್ನು ಹೊಸಪೇಟೆ ತಾಲ್ಲೂಕಿನ ರೈತರು ಸುಮಾರು ಐದು ವರುಷಗಳಿಂದಲೂ ಏತ ನೀರಾವರಿಯಿಂದ ಉಳುಮೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಈ ಭೂಮಿಯು "ಕಾಲುವೆ ನೀರಾವರಿ ಸರಬರಾಜಿಗೆ" ಒಳಪಡದಿದ್ದರೂ ಸಹ ಕಂದಾಯ ಇಲಾಖೆಯವರು ರೈತರಿಂದ ದ್ವಿಗುಣ ಪ್ರಮಾಣದ ದಂಡದ ರೂಪದಲ್ಲಿ ಕಂದಾಯವನ್ನು ವಸೂಲಿ ಮಾಡುತ್ತಿರುವುದು ನಿಜವೇ?

ಇ) ಹಾಗಾದರೆ, ದಂಡ ವಸೂಲಿ ಮತ್ತು ಈ ರೈತರ ಹಿತಾಸಕ್ತಿ ಕಾಪಾಡುವುದರಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮ.

ಉತ್ತರ : ಹೆಚ್.ಡಿ. ದೇವೇಗೌಡ(ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—